**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 543/2017**

ಪಿ.ಡಬ್ಲ್ಯೂ: 4
ಸಿ.ಡಬ್ಲ್ಯೂ: 4

ಸಾಕ್ಷಿದಾರರ ಹೆಸರು : ವೆಂಕಟೇಶ
ತಂದೆಯ ಹೆಸರು : ಮೂಡ್ಲಯ್ಯ
ವಯಸ್ಸು : 53 ವರ್ಷ
ಉದ್ಯೋಗ : ವ್ಯವಸಾಯ
ವಾಸಸ್ಥಳ : ಬಾವಿಕೆರೆ

**ದಿನಾಂಕ: 21-03-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಚಾಸಾ-1 ನನಗೆ ಗೊತ್ತು. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಗಳು ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಘಟನೆಯನ್ನು ಕಣ್ಣಾರೆ ಕಂಡಿರುವುದಿಲ್ಲ, ನನಗೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ನನಗೆ ಈ ಪ್ರಕರಣದ ಸಂಬಂಧ ಬೇರೇನೂ ಗೊತ್ತಿರುವುದಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)*

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ನಾನು ಮತ್ತು ಚಾಸಾ-1 ರವರು ಒಂದೇ ಊರಿನವರು ಎಂದರೆ ಸರಿ. ಆರೋಪಿತರು ನಮ್ಮ ಗ್ರಾಮದ ವಾಸಿಗಳು ಎಂದರೆ ಸರಿ. ನಮ್ಮ ಮನೆಯ ಪಕ್ಕ 2ನೇ ಆರೋಪಿಯ ಮನೆ ಇದೆ ಎಂದರೆ ಸರಿ. ಬಾವಿಕೆರೆ ಗ್ರಾಮದ ಕೋರೆಯ ಶನೇಶ್ವರ ದೇವಸ್ಥಾನದ ಬೀದಿಯಲ್ಲಿ ಚಾಸಾ-1 ಗಂಗಾಧರಪ್ಪನವರು ಮನೆಯಲ್ಲಿರುವಾಗ ಲಿಂಗಪ್ಪ ಎನ್ನುವವರು ತನ್ನ ಮನೆಗೆ ಬಂದಿದ್ದು, ಚಾಸಾ-1ರವರಿಗೆ ತಂಬಾಕು ಬೇಕು ಎಂದು ಕೇಳಿದ್ದಕ್ಕೆ ಚಾಸಾ-1ರವರು ತನ್ನ ಮನೆಯ ಪಕ್ಕದಲ್ಲಿದ್ದ ಅಂಗಡಿಯ ಬಾಗಿಲು ತೆಗೆದು ಕೊಡಲು ಹೋಗುತ್ತಿದ್ದಾಗ 5 ಮತ್ತು 6ನೇ ಆರೋಪಿತರು 1 ರಿಂದ 4ನೇ ಆರೋಪಿತರ ಜೊತೆ ಸೇರಿ ಇಲ್ಲಿಗೆ ಯಾಕೆ ಬಂದಿದ್ದೀಯಾ ಎಂದು ಚಾಸಾ-1ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದರೆ ನನಗೆ ಗೊತ್ತಿಲ್ಲ. 1ನೇ ಆರೋಪಿ ಕುಡುಗೋಲಿನಿಂದ ಚಾಸಾ-1ರವರ ಬಲಗೈ ಮುಷ್ಠಿಯ ಹಿಂಭಾಗಕ್ಕೆ ಹೊಡೆದು ರಕ್ತಗಾಯವುಂಟು ಮಾಡಿರುತ್ತಾರೆಂದರೆ ಸರಿಯಲ್ಲ.

ಗಲಾಟೆಯನ್ನು ಬಿಡಿಸಲು ಹೋದ ಚಾಸಾ-*2* ಮತ್ತು *3* ರವರಿಗೆ *1* ರಿಂದ *4*ನೇ ಆರೋಪಿತರು ಹಲ್ಲೆ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಚಾಸಾ-*2* ರಿಂದ *6* ರವರು ಗಲಾಟೆಯನ್ನು ಬಿಡಿಸಲು ಹೋದಾಗ ಆರೋಪಿ ಚಾಸಾ-*1* ರವರನ್ನು ಕೆಳಗೆ ತಳ್ಳಿ ಕಾಲಿದಿಂದ ತುಳಿದು ಚರಂಡಿಗೆ ಹಾಕಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆರೋಪಿತರು ಚಾಸಾ-*1* ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆರೋಪಿತರು ಚಾಸಾ-*2* ರವರ ಮೈಕೈಗೆ ಹೊಡೆದು ಹಲ್ಲೆ ಮಾಡಿ ಆಕೆಯ ಮಾನಕ್ಕೆ ಕುಂದುಂಟು ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆರೋಪಿತರು ಮತ್ತು ನಾನು ಈಗ ತುಂಬಾ ವಿಶ್ವಾಸದಿಂದ ಇದ್ದೇವೆ ಎಂದರೆ ಸರಿ. ಆರೋಪಿತರು ಮತ್ತು ನಾನು ವಿಶ್ವಾಸದಿಂದ ಇರುವ ಕಾರಣ ಆರೋಪಿತರ ಪರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನೇ ಈ ಪ್ರಕರಣದ ಘಟನೆಯನ್ನು ಬಿಡಿಸಿರುತ್ತೇನೆಂದರೆ ಸರಿಯಲ್ಲ.

***ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.***

ಪಾಟೀ ಸವಾಲು ಇಲ್ಲ

**ಮರುವಿಚಾರಣೆ: ಇರುವುದಿಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***